# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 837 |
| ಸದಸ್ಯರ ಹೆಸರು | : | ಡಾ॥ ಚಂದ್ರಶೇಖರ ಬಿ. ಪಾಟೀಲ್ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20-09-2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು. |

********

| ಕ್ರ.ಸಂ | ಕೇಳಲಾಗಿರುವ ಪ್ರಶ್ನೆಗಳು | ಉತ್ತರ |
|---|---|---|
| ಅ | ಮಂಡ್ಯ ತಾಲ್ಲೂಕಿನ ಕಿರಗಂದೂರ ಸರ್ವೆ ನಂ.204 ರಲ್ಲಿ ನಿಯಮಾವಳಿಗಳನ್ನು ಉಲ್ಲಂಘಿಸಿ ಕಂದಾಯ ಭೂಮಿಯನ್ನು ತುಂಡು ಭೂಮಿಯಾಗಿ ಖರೀದಿಸಿ ಸರ್ಕಾರದ ನಿಯಮ ಪಾಲಿಸದೆ ನಗರಾಭಿವೃದ್ಧಿ ಕಾಯಿದೆಯನ್ನು ಉಲ್ಲಂಘಿಸಿ, ಅಕ್ರಮ ಬಡಾವಣೆ ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಡ್ಯ ತಾಲ್ಲೂಕಿನ ಕಿರಗಂದೂರ ಸರ್ವೆ ನಂ.204ರಲ್ಲಿ ಕಂದಾಯ ಇಲಾಖೆಯಿಂದ ತುಂಡು ಭೂಮಿಯಾಗಿ ವಿಂಗಡಿಸಿ ಗುಂಟೆವಾರು ಸುಮಾರು 20ಕ್ಕೂ ಹೆಚ್ಚು ಜಮೀನುಗಳಿಗೆ ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ರವರು ಭೂ ಪರಿವರ್ತನೆ ಆದೇಶಗಳನ್ನು ನೀಡಿರುತ್ತಾರೆ.<br><br>ಈ ಪೈಕಿ ಸ.ನಂ.204/2 ಮತ್ತು 204/9ಕ್ಕೆ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡುವಂತೆ ಅರ್ಜಿದಾರರು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು, ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಹಾಗೂ ಅನುಮೋದಿತ ವಲಯ ನಿಯಮಾವಳಿಗಳಂತೆ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುತ್ತದೆ(ವಿವರ ಅನುಬಂಧ-1). |
| ಆ | ಬಂದಿದ್ದಲ್ಲಿ, ಬಡಾವಣೆಯನ್ನು ತೆರವುಗೊಳಿಸಿದ ಹಾಗೂ ಬಡಾವಣೆ ನಿರ್ಮಿಸಿರುವ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ರವರು ದಿನಾಂಕ:12-05-2022 ರ ಪತ್ರದಲ್ಲಿ ಮಂಡ್ಯ ತಾಲ್ಲೂಕಿನ ಕಿರಗಂದೂರ ಸರ್ವೆ ನಂ.204 ರಲ್ಲಿ ನಿಯಮಾವಳಿಗಳನ್ನು ಉಲ್ಲಂಘಿಸಿ ನಿವೇಶನಗಳನ್ನು ರಚಿಸಿರುವ ಬಗ್ಗೆ ಸ್ಥಳ ತನಿಖೆ ನಡೆಸಿ ವರದಿಯನ್ನು ಸಲ್ಲಿಸಲು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಿರುತ್ತಾರೆ.<br><br>ಅದರಂತೆ ಪ್ರಾಧಿಕಾರದ ವತಿಯಿಂದ ಸ್ಥಳ ತನಿಖೆ ನಡೆಸಿ, ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ರವರಿಗೆ ದಿನಾಂಕ: 23-08-2022 ರಂದು ವರದಿಯನ್ನು ಸಲ್ಲಿಸಲಾಗಿರುತ್ತದೆ(ವಿವರ ಅನುಬಂಧ-2). |

**ಸಂಖ್ಯೆ: ನಅಇ 321 ಮೈಅಪ್ರಾ 2022(ಇ)**

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು